ಸೇವೆ ಮಾಡಿ ಎಂಬ ಉಪದೇಶದ ಮೂಲಕ ಗೃಹಸ್ಥರು ಮತ್ತು ಸಂನ್ಯಾಸಿಗಳು – ಇಬ್ಬರಿಗೂ ಮೋಕ್ಷಮಾರ್ಗವನ್ನು ತೆರೆದಿಟ್ಟರು.

೪. ಶ್ರೀರಾಮಕೃಷ್ಣರು ಸ್ತ್ರೀಯರಿಗೆ ಆಧ್ಯಾತ್ಮಿಕತೆಯಲ್ಲಿಯೂ ವ್ಯಾವಹಾರಿಕತೆಯಲ್ಲಿಯೂ ಉನ್ನತ ಸ್ಥಾನವನ್ನು ನೀಡಿದರು. ಶಾರದಾದೇವಿಯವರನ್ನು 'ಫಲಹಾರಿಣಿ ಕಾಲಿ' ಯಂತೆ ಪೂಜಿಸಿದರು. ಆ ಮೂಲಕ, ನೂತನವಾದ ಸ್ತ್ರೀಜಾಗೃತಿಯನ್ನು ಹುಟ್ಟುಹಾಕಿದರು.

೫. ಸ್ವಾಮಿ ವಿವೇಕಾನಂದರಂತಹ ವೈಜ್ಞಾನಿಕ ಮನೋಭಾವವುಳ್ಳ ಯುವಕರಿಗೆ, "ಧರ್ಮವೂ ಒಂದು ವಿಜ್ಞಾನವೇ. ಏಕೆಂದರೆ, ಭಗವಂತನ ಸಾಕ್ಷಾತ್ಕಾರವೇ ಧರ್ಮ" ಎಂದು ತಿಳಿಸಿಕೊಟ್ಟರು. ಭಗವಂತನನ್ನು ನೋಡುವ ಮಾರ್ಗವನ್ನೇ 'ಯೋಗ' ಎಂದು ಬೋಧಿಸಿದರು. ಎಲ್ಲರೂ ಭಗವಂತನನ್ನು ನೋಡಲು ಸಾಧ್ಯ. ಅಷ್ಟೇ ಅಲ್ಲ, ಆತನನ್ನು ಕಾಣುವುದೇ ಜೀವನದ ಪರಮ ಲಕ್ಷ್ಯ ಎಂದು ಅವರು ಬೋಧಿಸಿದರು.

೬. ಜೀವನದಲ್ಲಿ ಸಿರಿವಂತರ ಮನೆಯ ದಾಸಿಯಂತೆ ಅನಾಸಕ್ತಿಯನ್ನು ಬೆಳೆಸಿಕೊಳ್ಳಬೇಕು ಎಂದು ಶ್ರೀರಾಮಕೃಷ್ಣರು ಒತ್ತಿ ಹೇಳಿದರು. ಭಗವಂತನ ಮೇಲೆ ಮಾಡುವ ಹೃತ್ಪೂರ್ವಕವಾದ ಭಕ್ತಿಯಿಂದ ಅನಾಸಕ್ತಿಯನ್ನು ಪಡೆದುಕೊಳ್ಳಬಹುದು; ಸತ್ಯ, ಪವಿತ್ರತೆ, ನಿಸ್ವಾರ್ಥ ಸೇವೆ, ನಂಬಿಕೆ, ಪ್ರಾರ್ಥನಾ ಮನೋಭಾವ ಇವೆಲ್ಲವನ್ನೂ ಗಳಿಸಿಕೊಳ್ಳಬಹುದು. ಇದನ್ನೇ ನಾವು ಸಮಾಜದ ಮುನ್ನಡೆ ಎಂದು ಕರೆಯಬಹುದೇ ಹೊರತು, ಬರೀ ಧನ ಮತ್ತು ಇಂದ್ರಿಯಭೋಗಗಳಲ್ಲ.

೭. ಶ್ರೀರಾಮಕೃಷ್ಣರ ನೂರಾರು ಗೃಹಸ್ಥ ಶಿಷ್ಯರು ಮತ್ತು ಸಂನ್ಯಾಸಿ ಶಿಷ್ಯರು ಅವರ ಮಾರ್ಗವನ್ನೇ ಅನುಸರಿಸಿ ಭಗವತ್ಸಾಕ್ಷಾತ್ಕಾರವನ್ನು ಪಡೆದುಕೊಂಡರು, ಅನಾಸಕ್ತರಾಗಿ ಬಾಳಿದರು. ಸಮಾಜಕ್ಕೆ ಸೇವೆ ಸಲ್ಲಿಸಿದರು. ಅಂತ್ಯಕಾಲದಲ್ಲಿ ಭಗವಂತನ ನಾಮಸ್ಮರಣೆ ಮಾಡುತ್ತ ನಗುನಗುತ್ತ ತೆರಳಿದರು.

೮. ಸ್ವಾಮಿ ವಿವೇಕಾನಂದರು ಶ್ರೀರಾಮಕೃಷ್ಣರ ಪ್ರೇರಣೆಯಿಂದಲೇ ಇವರುಗಳನ್ನೆಲ್ಲ ಸೇರಿಸಿ ರಾಮಕೃಷ್ಣ ಸಂಘವನ್ನಾಗಿ ರೂಪಿಸಿದರು. ಈ ಮಹಾನ್ ಸಂಸ್ಥೆಯು ಜನರ ಸೇವೆಯೇ ಜನಾರ್ದನನ ಸೇವೆ ಎಂಬ ಮಂತ್ರದ ಮೂಲಕ ದೀನ–ದಲಿತರ ಉದ್ಧಾರಕ್ಕಾಗಿ, ವಿವಿಧ ರೀತಿಯ ವಿದ್ಯೆ ಮತ್ತು ತಾಂತ್ರಿಕತೆಗಳ ಅಭಿವೃದ್ಧಿಗೆ ಕಾರಣವಾಗಿದೆ.

೯. **ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ –** ಆಧ್ಯಾತ್ಮಿಕ ಉನ್ನತಿಗಾಗಿಯೂ, ಮಾನವಕುಲದ ಅಭಿವೃದ್ಧಿಗಾಗಿಯೂ ಬಾಳಿರಿ ಎಂಬ ಉದ್ದೇಶದಿಂದ ಸ್ವಾಮಿ ವಿವೇಕಾನಂದರು ತನ್ನ ಸ್ವಂತ ಮೋಕ್ಷ ಮತ್ತು ಜಗತ್ತಿನ ಹಿತಕ್ಕಾಗಿ ಎಂಬ ಅವಳಿ ಆದರ್ಶಗಳನ್ನು, ನಮಗೆ ನೀಡಿದ್ದಾರೆ. ಅವರ ಈ ಆದರ್ಶದ ಸಾಕಾರರೂಪವೇ 'ರಾಮಕೃಷ್ಣ ಸಂಘ.' ಇದು ನಮ್ಮ ಸನಾತನ ಧರ್ಮದ ನೂತನ ರೂಪವೇ ಹೌದು.

ಇದರಲ್ಲಿ ಪುರಾತನ ಕಾಲದ ಎಲ್ಲ ಋಷಿಮುನಿಗಳೂ ಹಾಗೂ ಆಧುನಿಕ ಋಷಿಗಳಾದ ಗಾಂಧೀಜಿ, ವಿನೋಬಾ, ಅರವಿಂದರು, ರಮಣರು ಮುಂತಾದವರೆಲ್ಲರೂ ಏಕೀಭಾವವನ್ನು ಹೊಂದಿದ್ದಾರೆ. ಬನ್ನಿ, ನಾವೂ ಈ ಆದರ್ಶವನ್ನು ಸ್ವೀಕರಿಸಿ ಧನ್ಯರಾಗೋಣ.

## ಸ್ನೇಹಪ್ರಭ

**ಹಿರಿಯರ ಕೆಲವು ನಿರ್ಧಾರಗಳನ್ನು ಕಿರಿಯರು ಪ್ರಶ್ನಿಸುವುದು ತಪ್ಪೇ? ಹಾಗೆ ಮಾಡಿದಾಗ, ಹಿರಿಯರು ಅಸಹನೆಯನ್ನು ತೋರುವುದು ಕೂಡ ತಪ್ಪಲ್ಲವೇ? ಕಿರಿಯರು ಯಾವಾಗಲೂ ಹಿರಿಯರು ಹೇಳಿದ್ದನ್ನು ಚಾಚೂತಪ್ಪದೆ ಪಾಲಿಸಬೇಕೇ?**

ಹಿರಿಯರ ಕೆಲವು ನಿರ್ಧಾರಗಳನ್ನು ಕಿರಿಯರು ಪ್ರಶ್ನಿಸುವುದು ತಪ್ಪೇನಲ್ಲ. ಆದರೆ ಆ ರೀತಿ ಪ್ರಶ್ನಿಸುವುದು ನಮ್ಮ ಅಹಂಕಾರದ ಪರಿಣಾಮವಾಗಿರಬಾರದು. ಬದಲು ಉನ್ನತ ನೈತಿಕ ಮತ್ತು ಆಧ್ಯಾತ್ಮಿಕ ಆದರ್ಶವನ್ನು ಆಧರಿಸಿರಬೇಕು. ಎಲ್ಲಾ ವಿಷಯಗಳಲ್ಲಿಯೂ ಇತರರನ್ನು ವಿರೋಧಿಸುವುದೇ ಕೆಲವರ ಧ್ಯೇಯವಾಗಿರುತ್ತದೆ. ಇದಕ್ಕೆ ಯಾವುದೇ ಉನ್ನತ ತಾತ್ವಿಕ ಹಿನ್ನೆಲೆ ಇರುವುದಿಲ್ಲ. ಅದು ಅಹಂಕಾರದ ಪರಿಣಾಮವಾದರೂ ಅವರು ಯಾವುದಾದರೂ ಆದರ್ಶದ ನೆಪವನ್ನು ಮುಂದಿಟ್ಟು ತಮ್ಮನ್ನು ತಾವು ಸಮರ್ಥಿಸಿಕೊಳ್ಳುತ್ತಾರೆ; ತಾವು ಒಂದು ಆದರ್ಶಕ್ಕೆ ಹೋರಾಡುತ್ತಿರುವುದಾಗಿ ತಮ್ಮ ಅಹಂಕಾರವನ್ನು ಮರೆಯುತ್ತಾರೆ. ಇಂತಹ ಸೋಗಿನ 'ಆದರ್ಶವಾದಿ'ಗಳಿಂದಲೇ ಎಲ್ಲೆಲ್ಲಿಯೂ ಅಶಾಂತಿ. ಅಂತಹ ಸಂದರ್ಭದಲ್ಲಿ ಹಿರಿಯರು ಅಸಹನೆಯನ್ನು ತೋರುವುದೂ ಅಹಂಕಾರದ ಪರಿಣಾಮವೇ. ತತ್ತ್ವಾಧಾರಿತ ನಿರ್ಧಾರಗಳನ್ನು ಪ್ರಶ್ನಿಸಿದರೆ ಅಸಹನೆ ಉಂಟಾಗುವುದಿಲ್ಲ. ನಿರ್ಧಾರಗಳು ಸ್ವಾರ್ಥೋದ್ದೇಶಗಳಿಂದ ಕೂಡಿದ್ದು, ಅದಕ್ಕೆ ತತ್ತ್ವದ ಬಣ್ಣವನ್ನು ಬಳಿದಾಗ ಅವನ್ನು ವಿರೋಧಿಸಿದರೆ ಅಸಹನೆ ಉಂಟಾಗುವುದು ಸ್ವಾಭಾವಿಕ. ಒಟ್ಟಿನಲ್ಲಿ ನಮ್ಮ ಉದ್ದೇಶ ಪವಿತ್ರವಾಗಿರಬೇಕು. ಇಲ್ಲಿ ಹಿರಿಯ ಕಿರಿಯ ಎಂಬ ಪ್ರಶ್ನೆ ಏಳುವುದಿಲ್ಲ.

ವಿಧೇಯತೆ ಒಂದು ವಿಶಿಷ್ಟ ಗುಣ. ಕಿರಿಯರು ಹಿರಿಯರಿಗೆ ವಿಧೇಯರಾಗಿರುವುದು, ಕೆಳಗಿನ ಹುದ್ದೆಯಲ್ಲಿರುವವರು ಮೇಲಿನ ಹುದ್ದೆಯಲ್ಲಿರುವವರಿಗೆ ವಿಧೇಯರಾಗಿರುವುದು ಕುಟುಂಬದ ಮತ್ತು ಸಂಸ್ಥೆಯ ಹಿತದೃಷ್ಟಿಯಿಂದ ಅತ್ಯಂತ ಆವಶ್ಯಕ. ಅನ್ಯಾಯ ಅತ್ಯಾಚಾರಗಳು ನಡೆಯುತ್ತಿದ್ದರೆ ಅವನ್ನು ವಿರೋಧಿಸಬೇಕಾಗುತ್ತದೆ. ಆದರೆ ಅವಿಧೇಯತೆ ಎಲ್ಲ ಬಗೆಯ ಸಂಸ್ಥೆ, ಕಾರ್ಯಕ್ರಮಗಳಿಗೂ ಮಾರಕ. ಸ್ವಾರ್ಥೋದ್ದೇಶಗಳಿಗೆ ದಾಸರಾದ ಅನೇಕರು ವ್ಯಕ್ತಿಸ್ವಾತಂತ್ರ್ಯ, ಹಕ್ಕು ಮುಂತಾದ ಘನ ಆದರ್ಶಗಳ ಮುಸುಕಿನಲ್ಲಿ ಅವಿಧೇಯರಾಗಿ ವರ್ತಿಸುತ್ತ, ಕುಟುಂಬದ, ಸಂಸ್ಥೆಯ ಮತ್ತು ಒಟ್ಟು ಸಮಾಜದ ಸ್ವಾಸ್ಥ್ಯವನ್ನು ಕೆಡಿಸುತ್ತಾರೆ. ಸಮಾಜಹಿತದಲ್ಲಿ ವ್ಯಕ್ತಿಹಿತವನ್ನು ಕಾಣುವ ಮನಃಸ್ಥಿತಿಯನ್ನು ಬೆಳೆಸಿಕೊಳ್ಳೋಣ. ಆಗ ಇಂತಹ ಸಾಧಾರಣ ರೀತಿಯ ಪ್ರಶ್ನೆಗಳು ನಮ್ಮನ್ನು ಕಾಡುವುದಿಲ್ಲ.

(ಬರಹ: ಸ್ವಾಮಿ ನಿತ್ಯಸ್ಥಾನಂದ)